ಇ) ಈಗಾಗಲೇ ಎ ಐ ಸಿ ಟಿ ಇ ನವದೆಹಲಿಯು 5 ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸಲು 2002–03ನೇ ಸಾಲಿನಲ್ಲಿಯೇ ಮಂಜೂರಾತಿ ನೀಡಿದ್ದು, ಆಯವ್ಯಯದ ಕೊರತೆಯಿಂದಾಗಿ ಅವುಗಳನ್ನು ಪ್ರಾರಂಭಿಸಿರುವುದಿಲ್ಲ 2007–08ನೇ ಸಾಲಿನಲ್ಲಿ ಈಗಾಗಲೇ ಎ ಐ ಸಿ ಟಿ ಇ ಯಿಂದ ಮಂಜೂರಾಗಿರುವ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸಲು ಆಯವ್ಯಯದ ಅವಕಾಶವನ್ನು ಮಾಡಿಕೊಂಡು ನಂತರ ಲಿಂಗಸಗೂರು ತಾಲ್ಲೂಕಿಗೆ ಪಾಲಿಟೆಕ್ನಿಕ್ ಮಂಜೂರು ಮಾಡಲು ಎ ಐ ಸಿ ಟಿ ಇ, ನವದೆಹಲಿಯ ಅನುಮೋದನೆ ಪಡೆದ ನಂತರ ಕ್ರಮ ಕೈಗೊಳ್ಳಲಾಗುವುದು

984 (1099) ಶ್ರೀ ಅಂಜನಾಮೂರ್ತಿ (ನೆಲಮಂಗಲ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) 2006–07ನೇ ಸಾಲಿನಲ್ಲಿ ನವೆಂಬರ್, ಡಿಸೆಂಬರ್ ತಿಂಗಳುಗಳಲ್ಲಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಎಷ್ಟು ಗ್ರಾಮಗಳಿಗೆ ಅಭಿವೃದ್ಧಿ ಕಾಮಗಾರಿಗಳಿಗಾಗಿ ಹಣ ಖರ್ಚಾಗಿರುತ್ತದೆ,

ಆ) ಬಿಡುಗಡೆಯಾಗಿರುವ ಮೊತ್ತವೆಷ್ಟು?

ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) 2006–07ನೇ ಸಾಲಿನಲ್ಲಿ ನವೆಂಬರ್, ಡಿಸೆಂಬರ್ ತಿಂಗಳುಗಳಲ್ಲಿ ಚಾಮುಂಡೇಶ್ವರಿ ಮತ ಕ್ಷೇತ್ರಕ್ಕೆ 124 ಗ್ರಾಮಗಳಲ್ಲಿ ರಸ್ತೆ ಅಭಿವೃದ್ಧಿ ಹಾಗೂ ಕುಡಿಯುವ ನೀರು ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ

ಆ) 2006–07ನೇ ಸಾಲಿನಲ್ಲಿ ನವೆಂಬರ್, ಡಿಸೆಂಬರ್ ತಿಂಗಳುಗಳಲ್ಲಿ ಬಿಡುಗಡೆಯಾದ ಮೊತ್ತ ರೂ 550 00 ಲಕ್ಷಗಳು

985 (1181) ಶ್ರೀ ಆಂಜನೇಯ ಹೆಚ್ (ಭರಮಸಾಗರ) ಮಾನ್ಯ ಶ್ರೀ ಜಲಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಭದ್ರಾ ಮೇಲ್ದಂಡೆ ಯೋಜನೆಯ ಕಾಮಗಾರಿ ಯಾವಾಗ ಪ್ರಾರಂಭವಾಗುವುದು,

ಆ) ಈ ಯೋಜನೆಗೆ ಮೀಸಲಿಟ್ಟಿರುವ ಹಣ ಎಷ್ಟು,

ಇ) ಭದ್ರಾ ಮೇಲ್ದಂಡೆ ಯೋಜನೆಯ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು,

ಈ) ಪೂರ್ಣಗೊಂಡ ಬಳಿಕ ಎಷ್ಟು ತಾಲ್ಲೂಕುಗಳಿಗೆ ನೀರನ್ನು ಹಾಯಿಸಲಾಗುವುದು (ಸಂಪೂರ್ಣ ವಿವರ ನೀಡುವುದು)?

ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)

ಅ) ಭದ್ರಾ ಮೇಲ್ದಂಡೆ ಯೋಜನೆಯ ಕೆಳಕಂಡ 3 ಕಾಮಗಾರಿಗಳಿಗೆ ಟೆಂಡರ್‌ನ್ನು ದಿನಾಂಕ 22 12 2006 ರಂದು ಆಹ್ವಾನಿಸಿದ್ದು, ದಿನಾಂಕ 31 01 2007ರ ವರೆಗೆ ಗುತ್ತಿಗೆದಾರರ ಪೂರ್ವಾರ್ಹತೆ ಪರಿಶೀಲನೆಗಾಗಿ ಅರ್ಜಿಗಳನ್ನು ಸ್ವೀಕರಿಸಲಾಗಿದೆ

1) ತುಂಗಾ ನದಿಯಿಂದ ಭದ್ರಾ ಜಲಾಶಯಕ್ಕೆ 15 ಟಿ ಎಂ ಸಿ ನೀರೆತ್ತುವ ಏತ ನೀರಾವರಿ ಕಾಮಗಾರಿ

2) ಭದ್ರಾ ಜಲಾಶಯದಿಂದ (21 50 ಟಿ ಎಂ ಸಿ ನೀರೆತ್ತುವ) ಅಜ್ಜಂಪುರ ಬಳಿ ನಿರ್ಮಿಸಲು ಉದ್ದೇಶಿಸಿರುವ ಸುರಂಗದ ಬಳಿಯ ಡೆಲಿವೆರಿ ಛೇಂಬರ್ ವರೆಗೆ ಏತ ನೀರಾವರಿ ಕಾಮಗಾರಿ

3) ಅಜ್ಜಂಪುರ ಬಳಿ 6 9 ಕಿ ಮೀ ಉದ್ದದ ಸುರಂಗ ನಿರ್ಮಾಣದ ಕಾಮಗಾರಿ

ಕಾಮಗಾರಿಗಳ ಟೆಂಡರುಗಳನ್ನು ಅಂತಿಮಗೊಳಿಸಿದ ನಂತರ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು

ಆ) ಕರ್ನಾಟಕ ನೀರಾವರಿ ನಿಗಮ ನಿಯಮಿತದಿಂದ ಈ ಯೋಜನೆಗೆ 2006–07ರ ಸಾಲಿಗೆ ರೂ 50 00 ಲಕ್ಷಗಳ ಅನುದಾನವನ್ನು ನಿಗದಿ ಮಾಡಲಾಗಿದೆ

ಇ) ಸದರಿ ಯೋಜನೆಯನ್ನು ಮುಂದಿನ 4 ವರ್ಷಗಳಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ

ಈ) ನೀರನ್ನು ಒದಗಿಸಲು ಉದ್ದೇಶಿಸಿರುವ ತಾಲ್ಲೂಕುಗಳು ಮತ್ತು ನೀರಿನ ಪ್ರಮಾಣಗಳ ವಿವರ ಈ ಕೆಳಗಿನಂತಿದೆ

ತಾಲ್ಲೂಕು	ನೀರಾವರಿಗಾಗಿ (ಟಿ ಎಂ ಸಿ ಗಳಲ್ಲಿ)	ನೀರಾವರಿ ಪ್ರದೇಶ (ಎಕರೆಗಳಲ್ಲಿ)	ಕೆರೆಗಳನ್ನು ತುಂಬಿಸಲು (ಟಿ ಎಂ ಸಿ ಗಳಲ್ಲಿ)
I ಚಿಕ್ಕಮಗಳೂರು ಜಿಲ್ಲೆ			
1 ತರೀಕೆರೆ ತಾಲ್ಲೂಕು	0 34	6,288	0 026
2 ಕಡೂರು ತಾ	0 55	10,110	0 090
ಒಟ್ಟು (ಎ)	**0 89**	**16,398**	**0 116**

ತಾಲ್ಲೂಕು	ನೀರಾವರಿಗಾಗಿ (ಟಿ ಎಂ ಸಿ ಗಳಲ್ಲಿ)	ನೀರಾವರಿ ಪ್ರದೇಶ (ಎಕರೆಗಳಲ್ಲಿ)	ಕೆರೆಗಳನ್ನು ತುಂಬಿಸಲು (ಟಿ ಎಂ ಸಿ ಗಳಲ್ಲಿ)
II ಚಿತ್ರದುರ್ಗ ಜಿಲ್ಲೆ			
1 ಹೊಸದುರ್ಗ ತಾ	2 62	47,941	0 60
2 ಹಿರಿಯೂರು ತಾ	6 59	1,20,609	0 18
3 ಚಿತ್ರದುರ್ಗ ತಾ	2 33	42,630	0 30
4 ಚಳ್ಳಕೆರೆ ತಾ	1 44	26,445	0 83
ಒಟ್ಟು (ಬಿ)	**12 98**	**137,626**	**1 91**
III ತುಮಕೂರು ಜಿಲ್ಲೆ			
1 ಸಿರಾ ತಾ	–	–	1 49
2 ಕೊರಟಗೆರೆ ತಾ	–	–	0 33
3 ಮಧುಗಿರಿ ತಾ	–	–	1 18
ಒಟ್ಟು (ಸಿ)	–	–	**3 00**
IV ಕೋಲಾರ ಜಿಲ್ಲೆ			
1 ಕೋಲಾರ ತಾ	–	–	2 60
ಒಟ್ಟು (ಡಿ)	–	–	**2 60**
ಒಟ್ಟು (ಎ+ಬಿ+ಸಿ+ಡಿ)	**13 87**	**2,54,023**	**7 626**

986 (1182) ಶ್ರೀ ಆಂಜನೇಯ ಹೆಚ್ (ಭರಮಸಾಗರ) ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,